**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು–ಮಡಿಕೇರಿ**

**<u>ಎಸ್.ಸಿ ಸಂಖ್ಯೆ: 15/2025</u>**

ಫ್ರಾಸಾಃ 6

ಚಾಸಾಃ 7

| | | |
|---|---|---|
| ಸಾಕ್ಷಿದಾರರ ಹೆಸರು | : | ಹರೀಶ ಎಸ್.ಎಸ್ |
| ತಂದೆಯ ಹೆಸರು | : | ಲೇಟ್ ಶಿವಣ್ಣ |
| ವಯಸ್ಸು | : | 46 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಶಾಂತಳ್ಳಿ |

**ಸಾಕ್ಷಿಯನ್ನು ದಿನಾಂಕ 06–03–2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನ್ಯಾಯಾಲಯದಲ್ಲ ವಿಸಿ ಮೂಲಕ ಹಾಜರು ಪಡಿಸಲಾದ ವ್ಯಕ್ತಿ ಈ ಪ್ರಕರಣದ ಆರೋಪಿ ಸುರೇಶ್, ಆತ ನನ್ನ ಸ್ನೇಹಿತ. ಅವರು ಶಾಂತಳ್ಳಿಯಲ್ಲಿ ತನ್ನ ತಾಯಿಯಾದ ಮೃತ ಕಾವೇರಿಯೊಂದಿಗೆ ವಾಸಿಸುತ್ತಿದ್ದನು, ಇಬ್ಬರು ಕೂಲಿ ಕೆಲಸ ಮಾಡುತ್ತಿದ್ದರು. ಮೃತ ಕಾವೇರಿಯವರ ಗಂಡ ಸುಬ್ಬಯ್ಯ ಆತ ಸರ್ವೇ ಇಲಾಖೆಯಲ್ಲಿ ಕರ್ತವ್ಯ ಮಾಡಿ ಅವರ ಮರಣದ ನಂತರ ಅವರ ಪಿಂಚಣಿ ಹಣ ಅವರ ಹೆಂಡತಿಯಾದ ಮೃತ ಕಾವೇರಿಗೆ ಬರುತ್ತಿತ್ತು. ಸುರೇಶ್ ರವರ ಮನೆಯಿಂದ ಸ್ವಲ್ಪ ದೂರದಲ್ಲಿ ನಮ್ಮ ಮನೆ ಇದ್ದು, ಅವರ ಮನೆಯಲ್ಲಿ ಗಲಾಟೆಯಾದಾಗ ನನಗೆ ಗೊತ್ತಾಗುತ್ತಿರಲಿಲ್ಲ. ಅವರಿಬ್ಬರ ಒಡನಾಟ ಚೆನ್ನಾಗಿಯೇ ಇತ್ತು. ಸುಮಾರು 2 ವರ್ಷಗಳ ಹಿಂದೆ ಕಾವೇರಿ ಮೃತಳಾಗಿರುತ್ತಾಳೆ. ಆಕೆ ಮೃತಳಾದ ವಿಚಾರ ತಿಳಿದು

ಅವರ ಮನೆಗೆ ಮಾರನೇ ದಿನ ಬೆಳಗ್ಗೆ 8.00 ಗಂಟೆ ಸಮಯಕ್ಕೆ ಹೋಗಿದ್ದೆನು, ಆಗ ಅವರ ಮೃತ ಶರೀರ ಮನೆಯ ಜಗುಲಿಯಲಿತ್ತು, ಆಕೆಯ ಮೇಲೆ ಯಾವುದೇ ಗಾಯದ ಗುರುತುಗಳು ಕಂಡು ಬಂದಿರಲಿಲ್ಲ. ಆಕೆಯ ಸಾವಿಗೆ ಕಾರಣ ನನಗೆ ಗೊತ್ತಿಲ್ಲ. ಸುಮಾರು 10.00 ಗಂಟೆಯ ಸಮಯಕ್ಕೆ ಪೊಲೀಸರು ಸ್ಥಳಕ್ಕೆ ಬಂದು, ನಿಪಿ–7 ರಂತೆ ಮಹಜರ್ ಮಾಡಿ ಶವವನ್ನು ಆಸ್ಪತ್ರೆಗೆ ಶವ ಪರೀಕ್ಷೆಗಾಗಿ ಕೊಂಡೊಯ್ದುರು. ತದನಂತರ 2 ದಿನಗಳ ತರುವಾಯ ಪೊಲೀಸರು ಮತ್ತೆ ಸ್ಥಳಕ್ಕೆ ಬಂದು ನನ್ನ ಸಮಕ್ಷಮ ನಿಪಿ–7 ರಂತೆ ಮಹಜರ್ ಮಾಡಿದರು. ಆ ಸಮಯ ಅಲ್ಲಿಯೇ ಇತರೆ ಜನರು ಮತ್ತು ಪೊಲೀಸರು ಇದ್ದರು. ನಿಪಿ–7 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಅದರ ಸಂಗತಿಗಳು ನನಗೆ ಯಾರೂ ಓದಿ ಹೇಳಲಿಲ್ಲ. ನಿಪಿ–7 ರಲ್ಲಿನ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ–6 ರ ಎರಡು ಫೋಟೋಗಳನ್ನು ತೊರಿಸಿದ್ದು, ಅದರಲ್ಲಿ ಕಾಣುವ ಮನೆ ಆರೋಪಿ ಸುರೇಶ್ ಮತ್ತು ಮೃತ ಕಾವೇರಿಯದ್ದು ಮತ್ತು ಅದರಲ್ಲಿ ನಾನು ಇದ್ದೇನೆ ಎನ್ನುತ್ತಾರೆ. ಸದರಿ ನಿಪಿ–6 ನ್ನು ಯಾವ ಕಾರಣಕ್ಕಾಗಿ ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಿಪಿ–7 ಕ್ಕೆ ಸಹಿ ಮಾಡಿದ್ದೇನೆ, ನಿಪಿ–6 ರಲ್ಲಿ ಕಂಡು ಬಂದಿದ್ದೇನೆ ಎನ್ನುತ್ತಾರೆ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**ಪಾಟೀಸವಾಲು– ಸರ್ಕಾರಿ ಅಭಿಯೋಜಕರಿಂದಃ**

2. ಮೃತ ಕಾವೇರಿಗೆ ಆತನ ಗಂಡನಾದ ಸುಬ್ಬಯ್ಯ ಪಿಂಚಣಿ ಹಣ ಬರುತ್ತಿದ್ದು, ಸದರಿ ಎಲ್ಲಾ ಹಣವನ್ನು ಮದ್ಯಪಾನ ಮಾಡುವುದಕ್ಕಾಗಿಯೇ ಉಪಯೋಗಿಸುತ್ತಿದ್ದರು, ಈ ವಿಚಾರಕ್ಕಾಗಿ ಆರೋಪಿಗೂ ಮತ್ತು ಮೃತ ಕಾವೇರಿಗೂ ವಾಗ್ವದ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಕಾವೇರಿ ಮೃತಳಾಗುವುದಕ್ಕಿಂತ ಮುಂಚೆ ನನಗೆ ಹೇಳಿದ್ದಳು ಎಂದರೆ ಸರಿಯಲ್ಲ. ದಿಃ 31-05-2024 ರಂದು ಮೃತ ಕಾವೇರಿ ಮದ್ಯಪಾನ ಮಾಡಿ ಮನೆಯಲ್ಲೇ ರಾತ್ರಿ ಇದ್ದ ಸಂದರ್ಭ ಈ ವಿಚಾರಕ್ಕೆ ಆರೋಪಿ ಮೃತ ಕಾವೇರಿಯನ್ನು ಕುರಿತು ಬಂದ ಪಿಂಚಣಿ ಹಣವನೆಲ್ಲಾ ಮದ್ಯಪಾನ ಮಾಡುವುದಕ್ಕಾಗಿಯೇ ಖರ್ಚು ಮಾಡುತ್ತೀಯಾ ಎಂದು ಗಲಾಟೆ ಮಾಡಿ ಮನೆಯಲ್ಲಿಯೇ ಇದ್ದ ಸೌದೆ ಕೋಲಿನಿಂದ ಕಾವೇರಿಯ ದೇಹದ ಎಲ್ಲಾ ಭಾಗಗಳಿಗೆ ಹಲವಾರು ಬಾರಿ ಜೋರಾಗಿ ಹೊಡೆದು, ಗಾಯ ಪಡಿಸಿ ಸದರಿ ಗಾಯಗಳಿಂದ ಕಾವೇರಿ ಮೃತಳಾಗಿರುತ್ತಾಳೆ ಎಂದರೆ ಸರಿಯಲ್ಲ. ಈದಾದ ನಂತರ ನಾನು ಸುರೇಶನ ಬಳಿ ವಿಚಾರಿಸಿದಾಗ ಆತ ನನ್ನ ಬಳಿ ಕಾವೇರಿ ಮೆಟ್ಟಿಲಿನಿಂದ ಎಡವಿ ಬಿದ್ದು ಮೃತಳಾಗಿರುತ್ತಾಳೆ ಎಂದು ಸುಳ್ಳು ಮಾಹಿತಿ ನೀಡಿದ್ದ ಎಂದರೆ ಸರಿಯಲ್ಲ.

3. ದಿಃ 01-06-2024 ರಂದು ಸಂಜೆ 4.30 ರ ಸಮಯದಲ್ಲಿ ಪೊಲೀಸರು ಕಾವೇರಮ್ಮ ವಾಸವಿದ್ದ ಮನೆಗೆ ಬಂದು ಆರೋಪಿ ತೋರಿಸಿಕೊಟ್ಟ ಸ್ಥಳದಲ್ಲಿ ನಿಪಿ-7 ರಂತೆ ಮಹಜರ್ ಜರುಗಿಸಿ ನಿಪಿ-6 ರಂತೆ ಫೋಟೋಗಳನ್ನು ತೆಗೆದುಕೊಂಡರು ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಈಗ ನನಗೆ ಓದಿ ಹೇಳಿದಂತೆ ಅಂದರೆ " ಸುಬ್ಬಯ್ಯ ರವರ ಪೆಂಷನ್ ಹಣ -----------------ಎಂಬುದಾಗಿ ನೀಡಿದ ಹೇಳಿಕೆ" ಎಂದು ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ

ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ–12 ಎಂದು ಗುರುತಿಸಲಾಯಿತು. ಆರೋಪಿಯೇ ಕಾವೇರಿಯವರನ್ನು ದೊಣ್ಣೆಯಿಂದ ಹೊಡೆದು ಸಾಯಿಸಿರುವ ವಿಚಾರ ಗೊತ್ತಿದ್ದರೂ, ನಿಪಿ–6, 7 ಮತ್ತು 12 ರಲ್ಲಿನ ಸಂಗತಿಗಳು ಸತ್ಯ ಎಂದು ಗೊತ್ತಿದ್ದರೂ ಸಹ ಆತ ನನ್ನ ನೆರೆಹೊರೆಯವರಾದ ಮತ್ತು ಸ್ನೇಹಿತನಾದ ಆದ ಕಾರಣ ಆತನನ್ನು ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು– ಆರೋಪಿ ಪರ ಶ್ರೀ. ಎಂ.ಬಿ.ಎಸ್ ವಕೀಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–xxx

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೊಡಗು–ಮಡಿಕೇರಿ.